ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಬೆಂಗಳೂರು ದಕ್ಷಿಣ ಮತ್ತು ಉತ್ತರ ತಾಲ್ಲೂಕು ಹಾಗೂ ಬೆಂಗಳೂರು ಅರ್ಬನ್ ಅಗ್ಲಾಮರೇಷನ್ ಪ್ರದೇಶ (1991ರ ಜನಗಣತಿಯಲ್ಲಿದ್ದಂತೆ) ವನ್ನು ಕರ್ನಾಟಕ ಸರ್ಕಾರದ 1993 ಕೈಗಾರಿಕಾ ನೀತಿಯಂತೆ ಅಭಿವೃದ್ಧಿ ಹೊಂದಿದ ಪ್ರದೇಶವೆಂದು ಸಾರಲಾಗಿದ್ದು, ಈ ಪ್ರದೇಶದಲ್ಲಿ ವಿಶೇಷವಾದ ಪರಿಸರ ಮಾಲಿನ್ಯ ರಹಿತ ಹಾಗೂ ಉನ್ನತ ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳನ್ನು ಮಾತ್ರ ಪ್ರೋತ್ಸಾಹಿಸಲಾಗುವುದು.

ಆ) ಉದ್ದಿಮೆದಾರರು ಮಾಗಡಿ ತಾಲ್ಲೂಕಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬಂದಲ್ಲಿ ಸರ್ಕಾರದ 1998ರ ಕೈಗಾರಿಕಾ ನೀತಿಯಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಪ್ರೋತ್ಸಾಹಕ ಮತ್ತು ರಿಯಾಯಿತಿಗಳನ್ನು ನೀಡಲಾಗುವುದು.

ದೇವನಹಳ್ಳಿ ಬಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ

2050 - ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಬಳಿ ನಿರ್ಮಾಣ ಕಾರ್ಯವನ್ನು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಂಬಂಧಪಟ್ಟಂತೆ ಇಲ್ಲಿಯವರೆವಿಗೂ ಆಗಿರತಕ್ಕ ಸರ್ಕಾರದ ಕಾರ್ಯಕ್ರಮಗಳೇನು?

ಆ) ಯಾವ ಸಂಸ್ಥೆ ಇವರ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದೆ, ಇದಕ್ಕಾಗಿ ಅವಶ್ಯಕತೆ ಇರುವ ಜಮೀನೆಷ್ಟು, ಇದಕ್ಕೆ ಕಾರಣಗಳೇನು?

ಇ) ನಿರ್ಮಾಣಕ್ಕೆ ಸರ್ಕಾರಿ ಜಮೀನು ಹಾಗೂ ರೈತರ ಜಮೀನು ಎಷ್ಟು ಎಕರೆ ಬೇಕಾಗುತ್ತದೆ?

ಈ) ರೈತರ ಜಮೀನು ಸ್ವಾಧೀನಪಡಿಸಿಕೊಂಡಲ್ಲಿ ಒಂದು ಎಕರೆಗೆ ಎಷ್ಟು ಹಣ ಕೊಡಲಾಗುತ್ತದೆ (ಇದರ ಪೂರ್ಣ ವಿವರ ಒದಗಿಸುವುದು)

ಉ) ಈ ಗ್ರಾಮಗಳ ಜನತೆಗೆ ಯಾವ ರೀತಿ ಪುನರ್ ವ್ಯವಸ್ಥೆ ಮಾಡಲಾಗುತ್ತಿದೆ. ಇದರ ಪೂರ್ಣ ವಿವರ ನೀಡುವುದು.

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಸರ್ಕಾರದ ವತಿಯಿಂದ ಅಂತರ ರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣಕ್ಕಾಗಿ ದೇವನಹಳ್ಳಿ ತಾಲ್ಲೂಕು ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಟ್ಟು 5062 ಎಕರೆ 24 ಗುಂಟೆ ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಕಾರ್ಯ ನಡೆಯುತ್ತಿದೆ.

ಆ) ಈ ವಿಮಾನ ನಿಲ್ದಾಣದ ಕಾರ್ಯವನ್ನು ಬಿಲ್ಡ-ಓನ್-ಆಪರೇಟ್ ಆಧಾರದಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಟಾಟಾ ಕೈಗಾರಿಕೆ ಮತ್ತು ಅವರ ಗುಂಪಿಗೆ ವಹಿಸಿದೆ. ಇದಕ್ಕಾಗಿ

ಸುಮಾರು 5062.24 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಈ ವಿಮಾನ ನಿಲ್ದಾಣದ ಚಟುವಟಿಕೆಗೆ ಅವಶ್ಯವಿರುವ ಎಲ್ಲಾ ಕಾರ್ಯಗಳಿಗೆ ಇಷ್ಟು ಜಮೀನು ಬೇಕಾಗಬಹುದೆಂದು ಅಂದಾಜುಮಾಡಲಾಗಿದೆ.

ಇ) ಸ್ವಾಧೀನಪಡಿಸಿಕೊಳ್ಳಲಾಗಿರುವ ಜಮೀನಿನ ವಿವರ ಈ ಕೆಳಗಿನಂತಿದೆ:

1. ಸರ್ಕಾರಿ ಜಮೀನು - 1985 ಎಕರೆ 13 ಗುಂಟೆ
2. ಅರಣ್ಯ ಜಮೀನು - 437 ಎಕರೆ 22 ಗುಂಟೆ.
3. ಖಾಸಗಿ ಜಮೀನು - 2639 ಎಕರೆ 24 ಗುಂಟೆ

ಈ) ಜಮೀನು ಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಸದರಿ ಜಮೀನುಗಳಿಗೆ ನೀಡುವ ಪರಿಹಾರ ಧನವನ್ನು ಇದಕ್ಕಾಗಿ ಜೀಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ನಿರ್ಧರಿಸುವುದು.

ಉ) ಅರಸಿನಕಂಟೆ ಮಜರಾ ಬಾವಪುರ ಗ್ರಾಮಾತಾಣದಲ್ಲಿ 18 ಎಕರೆ 21ಗುಂಟೆ ಮತ್ತು ಅಣ್ಣೆಶ್ವರ ಗ್ರಾಮಾದ ಊರು ಬಡಾವಣೆಗಾಗಿ ಇರುವ 5 ಗುಂಟೆ ಸರ್ಕಾರಿ ಜಮೀನು ಸೇರಿ ಒಟ್ಟು 13 ಎಕರೆ 26 ಗುಂಟೆ ಗ್ರಾಮಾತಾಣ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮಗಳು ಜಾರಿಯಲ್ಲಿ ಇರುತ್ತವೆ. ಅರಿಸಿನಕುಂಟೆ ಗ್ರಾಮದ ಜಮೀನಿನ ವಿವರಗಳು ಈ ಕೆಳಕಂಡಂತಿವೆ:

1) ಊರು - 8 ಎಕರೆ 12 ಗುಂಟೆ
2) ಹಳ್ಳ - 20 ಗುಂಟೆ
3) ಹದ್ದುಬಸ್ತು ಹಿಡಿದ ಹಳ್ಳ - 9ಎಕರೆ 29 ಗುಂಟೆ

ಊ) ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಕಾಯ್ದೆ ಕಲಂ 228(4)ರ ಅನ್ವಯ ಅಧಿಸೂಚನೆ ಪ್ರಕಟಗೊಂಡ ನಂತರ ಕಂದಾಯ ಇಲಾಖೆಯ ಜಿಲ್ಲಾಧಿಕಾರಿಗಳಿಂದ ಭೂಸ್ವಾಧೀನ ಕ್ರಮದಿಂದ ನಿರಾಶ್ರಿತರಾಗುವ ಸಂತ್ರಸ್ಥರ ಪಟ್ಟಿಯನ್ನು ಪಡೆದು ನಂತರ ಅವರ ಪುನರ್ ವಸತಿ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿರುವ ವಿದ್ಯಾರ್ಥಿ ವಸತಿನಿಲಯಗಳ ಸಂಖ್ಯೆ.

2051 - ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬರತಕ್ಕ ಪರಿಶಿಷ್ಟಜಾತಿ ವಿದ್ಯಾರ್ಥಿನಿಲಯಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಲಯಗಳೆಷ್ಟು?